**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 238(194)
ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13/09/2022
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| 1 | ಪುರಸಭೆ ವ್ಯಾಪ್ತಿಯಲ್ಲಿ ವಸತಿ ಉದ್ದೇಶದ ಕಟ್ಟಡ ನಿರ್ಮಾಣಕ್ಕೆ ನಗರ ಯೋಜನಾ ಪ್ರಾಧಿಕಾರದಿಂದ ಪಡೆಯಬೇಕಾಗಿದ್ದ ಅನುಮತಿಯನ್ನು ರದ್ದುಗೊಳಿಸಲಾಗಿದೆಯೇ; ರದ್ದುಗೊಳಿಸಲಾಗಿದ್ದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನಿಡುವವರು ಯಾರು; ಅದರ ಪ್ರಕ್ರಿಯೆ ಏನು;(ಸಂಬಂಧಿಸಿದ ಆದೇಶದ ಪ್ರತಿ ನೀಡುವುದು) | ಪುರಸಭೆ ವ್ಯಾಪ್ತಿಯಲ್ಲಿ ವಸತಿ ಉದ್ದೇಶದ ಕಟ್ಟಡ ನಿರ್ಮಾಣಕ್ಕೆ ನಗರ ಯೋಜನಾ ಪ್ರಾಧಿಕಾರದಿಂದ ಪಡೆಯಬೇಕಾಗಿದ್ದ ಅನುಮತಿಯನ್ನು ಸರ್ಕಾರದಿಂದ ರದ್ದುಗೊಳಿಸಿರುವುದಿಲ್ಲ.<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 36 ಶಾಸನ 2021, ದಿನಾಂಕ: 07/10/2021ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4-K ನ್ನು ಸೇರ್ಪಡೆಗೊಳಿಸಿ ದಿನಾಂಕ: 12/08/2021ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ತಿದ್ದುಪಡಿಯಂತೆ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿರುವ ಎಲ್ಲಾ ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿಗೆ ಅನುಮತಿ ನೀಡುವ ಪೂರ್ವದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 15 ಶಾಸನ 2022, ದಿನಾಂಕ: 18/05/2022ರಲ್ಲಿ, ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ. 387ನೇ ಪ್ರಕರಣವನ್ನು ದಿನಾಂಕ: 12/08/2021 ರಿಂದ ಜಾರಿಗೆ ಬರುವಂತೆ ಬಿಟ್ಟು ಬಿಡಲಾಗಿದೆ(ಪ್ರತಿ ಲಗತ್ತಿಸಿದೆ). |
| 2 | ರಾಜ್ಯದ ಪುರಸಭೆ ವ್ಯಾಪ್ತಿಯಲ್ಲಿ ಎ ಖಾತಾ ಆಸ್ತಿ ಮತ್ತು ಬಿ ಖಾತಾ ಆಸ್ತಿಗಳಿಗೆ ವಿಧಿಸುತ್ತಿರುವ ಕಂದಾಯದಲ್ಲಿ ಬಹಳ | ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರಲ್ಲಿ ಪುರಸಭೆ ವ್ಯಾಪ್ತಿಯ ಆಸ್ತಿಗಳಿಗೆ ಎ ಖಾತಾ ಮತ್ತು ಬಿ ಖಾತಾ ಎಂಬ ಪದಗಳು ಬಳಕೆಯಲ್ಲಿರುವುದಿಲ್ಲ. |

| | | |
|---|---|---|
| | ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ವ್ಯತ್ಯಾಸ ಸರಿಪಡಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಮಾಡಲಾಗುವುದು; | ಬದಲಾಗಿ ಅಧಿಕೃತ ಹಾಗೂ ಅನಧಿಕೃತ ಕಟ್ಟಡಗಳು ಎಂಬುದಾಗಿ ಕರೆಯಲ್ಪಡಲಾಗುತ್ತದೆ. ಈಗಾಗಲೇ ನಿರ್ಮಾಣವಾಗಿರುವ ಅನಧಿಕೃತ ಕಟ್ಟಡಗಳಿಗೆ ಅವು ಅನಧಿಕೃತವಾಗಿರುವಷ್ಟು ಕಾಲ ಕರ್ನಾಟಕ ಪೌರಸಭಾ ಅಧಿನಿಯಮ 1964ರ ಕಲಂ 107 ರಲ್ಲಿನ ಅವಕಾಶದಂತೆ ತೆರಿಗೆಯ ಎರಡರಷ್ಟು ಸಮನಾದ ದಂಡವನ್ನು ವಿಧಿಸಲಾಗುತ್ತಿದೆ. ಸದರಿ ದಂಡದ ಮೊತ್ತವನ್ನು ಬದಲಾಯಿಸುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. |
| 3. | ಪುರಸಭೆ ವ್ಯಾಪ್ತಿಯಲ್ಲಿ ಬಿಬಿಎಂಪಿ ಮಾದರಿಯಲ್ಲಿ ಬಿ ಖಾತಾಗಳನ್ನು ಎ ಖಾತಾಗಳಾಗಿ ಪರಿವರ್ತಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಮಾಡಲಾಗುವುದು; | ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಖಾತೆ ವಿಷಯಗಳಿಗೆ(ಇ-ಆಸ್ತಿ/ಇ-ಸ್ವತ್ತು) ಸಂಬಂಧಿಸಿದಂತೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯ ಪರಿಶೀಲನೆಯಲ್ಲಿರುತ್ತದೆ. |
| 4. | ತೆರಿಗೆ ಪಾವತಿದಾರರಿಗೆ ಪುರಸಭೆ ವ್ಯಾಪ್ತಿಯಿಂದ ಸಿಗುವ ಸೌಲಭ್ಯಗಳು ಯಾವುವು; ಯಾವ ರೀತಿಯ ಸೌಲಭ್ಯಗಳನ್ನು ನೀಡುವ ಜವಾಬ್ದಾರಿ ಪುರಸಭೆಯದ್ದಾಗಿರುತ್ತದೆ? | ಭಾರತ ಸಂವಿಧಾನದ 12 ನೇ ಅನುಸೂಚಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸಲು ನಿರ್ದಿಷ್ಟ ಪಡಿಸಲಾಗಿರುತ್ತದೆ.<br>1. ಪಟ್ಟಣ ಯೋಜನೆ ಸೇರಿದಂತೆ ನಗರ ಯೋಜನೆ<br>2. ಭೂ ಉಪಯೋಗದ ನಿಯಂತ್ರಣ ಮತ್ತು ಕಟ್ಟಡಗಳ ನಿರ್ಮಾಣ<br>3. ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಯೋಜನೆ<br>4. ರಸ್ತೆಗಳು ಮತ್ತು ಸೇತುವೆಗಳು<br>5. ಗೃಹ, ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಗಳಿಗೆ ನೀರು ಸರಬರಾಜು<br>6. ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಸಂರಕ್ಷಣೆ ಮತ್ತು ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ<br>7. ಅಗ್ನಿಶಾಮಕ ಸೇವೆಗಳು<br>8. ನಗರ ವನ ನಿರ್ಮಾಣ, ಪರಿಸರ ಸಂರಕ್ಷಣೆ ಮತ್ತು ಜೀವ ಪರಿಸರ ಅಂಶಗಳ ಸಂವರ್ಧನೆ<br>9. ಅಂಗವಿಕಲರು ಮತ್ತು ಮನೋವಿಕಲರೂ ಸೇರಿದಂತೆ ಸಮಾಜದ ದುರ್ಬಲ ವರ್ಗದವರ ಹಿತಾಶಕ್ತಿ ಕಾಪಾಡುವುದು |

| | | | |
|---|---|---|---|
| | | 10. | ಕೊಳಚೆ ಪ್ರದೇಶಾಭಿವೃದ್ಧಿ ಮತ್ತು ಅವುಗಳ ಸುಧಾರಣೆ |
| | | 11. | ನಗರ ಬಡತನ ನಿರ್ಮೂಲನೆ |
| | | 12. | ಉದ್ಯಾನವನಗಳು, ತೋಟಗಳು, ಆಟದ ಮೈದಾನದಂತಹ ನಗರ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದು |
| | | 13. | ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸೌಂದರ್ಯೋಪಾಸನಾ ವಿಷಯಗಳ ಸಂವರ್ಧನೆ |
| | | 14. | ಹೆಣ ಹೂಳುವುದು ಮತ್ತು ಸ್ಮಶಾನಗಳು, ಶವ ದಹನ, ಸುಡುಗಾಡು ಮತ್ತು ವಿದ್ಯುತ್ ಚಿತಾಗಾರಗಳು |
| | | 15. | ದನದ ದೊಡ್ಡಿಗಳು, ಪಾಣಿ ಹಿಂಸಾ ಪ್ರತಿಬಂಧ |
| | | 16. | ಜನನ ಮತ್ತು ಮರಣಗಳ ನೋಂದಣಿ, ಜನನ ಮರಣ ಅಂಕಿ ಅಂಶಗಳು |
| | | 17. | ಬೀದಿ ದೀಪಗಳು, ವಾಹನ ನಿಲುಗಡೆ ಸ್ಥಳಗಳು, ಬಸ್ ನಿಲ್ದಾಣಗಳು ಮತ್ತು ಸಾರ್ವಜನಿಕ ಸೌಕರ್ಯಗಳು ಸೇರಿದಂತೆ ಸಾರ್ವಜನಿಕ ಸೌಲಭ್ಯಗಳು |
| | | 18. | ಕಸಾಯಿಖಾನೆಗಳ ಮತ್ತು ಚರ್ಮ ಹದ ಮಾಡುವ ಕಾರ್ಖಾನೆಗಳ ನಿಯಂತ್ರಣ |

ಸಂಖ್ಯೆ: ನಅಇ 207 ಜಿಇಎಲ್ 2022(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IV A | ಬೆಂಗಳೂರು, ಗುರುವಾರ, ೦೭, ಅಕ್ಟೋಬರ್, ೨೦೨೧(ಆಶ್ವಯುಜ, ೧೫, ಶಕವರ್ಷ, ೧೯೪೩)<br>BENGALURU, THURSDAY, 07, OCTOBER, 2021(ASHWAYUJA, 15, SHAKAVARSHA, 1943) | ನಂ. ೮೧೮<br>No. 818 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 36 SHASANA 2021, BENGALURU, DATED:07.10.2021**

The Karnataka Town and Country Planning (Amendment) Bill, 2021 ಇದಕ್ಕೆ 2021ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 31 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO. 31 OF 2021

(First published in the Karnataka Gazette Extra-ordinary on the 7th day of October, 2021)

### THE KARNATAKA TOWN AND COUNTRY PLANNING (AMENDMENT) ACT, 2021

(Received the assent of the Governor on the 5th day of October, 2021)

An Act further to amend the Karnataka Town and Country Planning Act, 1961.

Whereas it is expedient further to amend the Karnataka Town and Country Planning Act, 1961 (Karnataka Act 11 of 1963) for the purposes hereinafter appearing;

Be it enacted by the Karnataka State Legislature in the seventy second year of the Republic of India as follows, namely:-

**1. Short title and commencement.-** (1) This Act may be called the Karnataka Town and Country Planning (Amendment) Act, 2021.

(2) The section 2 and 3 shall be deemed to have come into force with effect from the 12th day of August, 2021, section 4 shall be deemed to have come into force with effect from the 5th day of July, 2021 and other provisions shall come into force at once.

**2. Insertion of new sections 4-I, 4-J and 4-K.-** In the Karnataka Town and Country Planning Act, 1961 (Karnataka Act 11 of 1963) (hereinafter referred to as the Principal Act), after section 4H, the following shall be inserted, namely:-

**"4-I. Town and country planning officer for local authority.-** (1) In respect of Planning Authority defined under sub-clause (b) of clause (7) of section 2, at the time of constituting the authority, the State Government in consultation with the Director of Town and Country planning, shall designate an officer not below the rank of Assistant Director from the department of Town and Country Planning, who must be a holder of Bachelor's degree or Master's degree in Town Planning as Town and country planning officer cum member secretary.

(2) The officer designated under sub-section (1) shall be subordinate to the Director of Town and Country planning and exercise the powers and perform functions specified in sub-section (3) and (4) and shall co-ordinate and assist the functions of the planning authority, subject to the general control and supervision of the Director.

(3) The officer designated shall exercise the powers and discharge the functions of the Member Secretary of the Planning Authority in respect of section 5 to sections 13 of the Act.

(4) The officer designated shall carry out survey of the planning area, prepare an existing-land-use map and master plan for the local planning area and forward the same to the Planning Authority.

(5) The expenditure incurred towards the preparation of master plan shall be borne by the local authority as specified under section 68-A of the Act.

**4-J. Functions of the Planning Authority.-** (1) The functions of the Planning Authority shall be as follows, namely:-

(i) Preparing plan, promoting and regulating the orderly growth of urban and rural area, including land use;
(ii) circulation, preparation and implementation of the master plan; and
(iii) preparing and execution of town planning schemes and development schemes and securing the development of the local planning area.

(2) To carry out the functions specified under sub-section (1), the Planning Authority shall have the power to undertake study and survey, acquire, hold, manage and dispose of moveable and immovable property within the local planning area, to carry out building, engineering and other operations and generally to do all things necessary or expedient for the purpose of such development and for purposes incidental thereto.

**4-K. Development of land in an area other than the local planning area.-** (1) Any person intending to carry out development on any land in an area other than the local planning area as notified under section 4-A, shall make an

application in writing to the local authority for permission in such form and containing such particulars and with such documents as may be specified in the regulations.

(2) The local authority shall, before according permission under sub-section (1), shall obtain prior approval of the Director of Town and Country planning or any subordinate officer not below the rank of Assistant Director of Town Planning, authorised by him.

(3) The State Government shall notify the regulations for development, including earmarking space for parks, civic amenities and utilities for such areas, in consultation with the Director of Town and Country planning.

(4) The Director of Town and Country planning may authorize his subordinate officer not below the rank of Assistant Director of Town Planning, for the regulation of such developments.

(5) The regulations notified by the Government under sub-section (3) shall be applicable to the respective jurisdiction of the local authority in such area.

(6) The Director of Town and Country planning may levy a fee for development as notified by the Government, from time to time.

(7) The fee collected under sub-section (6) shall be remitted to the consolidated fund of the State.

(8) Wherever the planning areas are declared under section 4-A, till the constitution of the Planning Authority under section 4-C, the local authority shall obtain prior approval of the Director of Town and Country planning or any subordinate officer not below the rank of Assistant Director of Town Planning, authorised by him, before according permission under sub-section (1).

(9) Where any development of land has been carried out,-

(a) without permission under this section; and

(b) in contravention of any permission granted or any condition subject to which permission has been granted.

the local authority shall exercise the powers as under the relevant laws time being in force to initiate appropriate action.

(10) Where local planning area is not declared under section 4-A, in such areas,-

(a) the department of Town and Country planning shall provide the village extension plan for development and opinion for diversion of land uses under the provisions of this Act and the Karnataka Land Revenue Act, 1964 as notified by the Government.

(b) the Director of Town and Country planning or the officer authorized by him not below the rank of Assistant Director of Town Planning, who must be a holder of Bachelor's degree or Master's degree in Town Planning, may prepare village or settlement extension plans sought by the Central or the State

Government departments or Board, authority or body constituted by or under any law and owned or controlled by the State or the Central Government as mandated for areas notified for any State or Central Government schemes, where local planning area is not declared."

**3. Amendment of section 14-B.-** In the Principal Act, in section 14-B,-

(1) in sub-section (1),-

(a) after the words "The Planning Authority shall issue Development Rights" the words "in the form of Notional land" shall be inserted;

(aa) the following shall be inserted at the end, namely:-

"The site remaining after surrender shall have same floor area which was available before surrender for the original site or land as per regulation.";

(b) after sub-section (1), the following proviso shall be inserted, namely:-

"Provided that, any 'Area' surrendered in the above manner before 03.06.2004 shall not be eligible for Development Rights."

(2) for sub-section (3), the following shall be substituted, namely:-

"(3) No Development Rights shall be granted under this section unless the Public Authority deposits the amount with Local Authority equal to one percent of the market value of the area required:

Provided that, the State or Central Government Agencies for the development of affordable housing projects, slum redevelopment projects, Local Authority and Planning Authority are exempted from such deposition."

(3) for sub-section (4), the following shall be substituted, namely:-

"(4) whenever, the Public Authority intends to procure any 'Area' for any public purpose under sub-section (1), it shall follow the prescribed procedure to,-

(i) notify the details of the Area, seeking consent or objection from the owners of the Area or interested persons, to surrender the Area by availing Development Rights, instead of monetary compensation, within thirty days from the date of publication of the notification in the Official Gazette and in two daily newspapers;

(ii) get the consent of the owners to surrender the 'Area' by availing Development Rights;

(iii) issue Provisional Acceptance Order and take physical possession of the 'Area' agreed to be surrendered by the owner;

(iv) get the Relinquishment deed executed and registered in favour of the Public Authority; and

(v) recommend to the Planning Authority to issue Development Rights Certificate to the owners for the Area surrendered with a certificate that no development rights certificate or compensation had been issued in this regard by any Public Authority or Planning Authority:

Provided that, in case the land owner or interested persons submit the claim to surrender the remaining portion of the land notified under clause (i) as the land is rendered unfit for the beneficial use of the land owner or interested persons, the Public Authority shall conduct the enquiry and pass suitable order to procure the remaining portion of the land and obtain the registered relinquishment deeds from the land owners."

(3A) for sub-section (5), the following shall be substituted, namely :-

"(5) on receipt of the recommendation from the Public Authority, the Planning Authority shall, after verification that no Transferable Development Right has been issued before by that Planning Authority on the same parcel of land, within thirty days from the date of receipt of recommendations issue Development Right Certificate to the owner in the prescribed form, under intimation to the Public Authority specifying the extent of notional land as Development rights admissible subject to such terms and conditions as may be prescribed. Any liability with respect to the issue of Development right arising out of the action of the Public Authority under sub-section (4) shall be limited to the Public Authority and the Planning Authority shall not be held responsible for the same."

(4) sub-section (9), shall be omitted.

(4A) after sub-section (10), the following proviso shall be inserted, namely :-

"Provided that, in cases where land has been procured and possession has been taken by the Public Authority five years or more prior to the date of commencement of the Karnataka Town and Country Planning (Amendment) Act, 2021 for the purpose specified above but no Development Right Certificate has been issued till the commencement of the said amendment Act, in such procurement process land owners shall be eligible for benefit of Development Rights as per the said amendment Act."

(5) for sub-section (13), the following shall be substituted, namely:-

"(13) The Development rights may be utilized within the same plot or in other area in the same Local Planning area or as notified by the Government, by the owner or the owner of such Development Rights may transfer the Development rights to a transferee as Transferable Development Rights which may be sold or utilized in any area as prescribed within the Local Planning Area or as notified by the Government."

(6) in sub-section (19),-

(a) after the words "Planning Authority" the words "and Public Authority" shall be inserted; and

(b) at the end, the following shall be inserted, namely:-

"and for stocking, banking and trading of Development Rights or Transferrable Development Rights in the State."

(7) in sub-section (22), for the words “order of the Planning Authority” the words “decision of the Public Authority or Planning Authority” shall be substituted.

(8) in sub-section (24), after the words “The Member Secretary of the Planning Authority” the words “or the Chief Executive Officer of the Public Authority, as the case may be,” shall be inserted.

(9) for the Table and the entries relating thereto, the following shall be substituted, namely:-

“**Table**

[see sub-section (1)]

**QUANTUM OF DEVELOPMENT RIGHTS PERMITTED**

| **Sl. No.** | **Area Surrendered** | **Development Rights permitted** |
|---|---|---|
| **1** | **Land Development Rights** | |
| | (i) Any road widening/any road formation as proposed in Master Plan or as proposed by the Local Authority or Developing Authority.<br>(ii) Any Infrastructure Projects approved by the Government (Transportation, Water Supply, Sewage, Electricity, etc.,).<br>(iii) Providing for parking, Parks, playgrounds, and open spaces, or any other public places proposed in the Master Plan or proposed by Local Authority and redevelopment projects on private land<br>(iv) Providing EWS/LIG/ affordable housing/Slum redevelopment project on private land<br>(v) Any other public purpose notified by the Government from time to time. | DR in the form of notional land which shall be equal to two times of the Area surrendered. |

| 2 | Building Development Rights | |
|---|---|---|
| a. | All types of buildings.<br>(The Area considered for quantum of Development Rights shall be the Area surrendered limited to the allowable Floor Area Ratio (FAR) for such building area.) | Development Rights in the form of notional land which shall be equal to two times the land area derived by dividing the value of the building / portion of the building surrendered, by the market value of the land / plot on which the building is situated.<br>The method of valuation of building shall be as prescribed. |

(10) after the Note of the Table, under the heading Explanation,-

(a) in clause (b), the words "This amount shall be equal to the market value of the area to be acquired" shall be omitted.

(b) for clause (k), the following shall be substituted, namely:-

"(k) "Transferable Development Rights" (TDR) means the Development Right in the form of notional land transferred by the owner to a transferee, which may be sold or disposed or utilized elsewhere in the Local Planning Area or any other area notified by the Government. The DR of the 'Area' surrendered in the form of Notional land, shall be permitted to be utilized as TDR, only after factorizing the market value of the originating plot and the receiving plot, as specified in the terms and conditions; and

(c) after clause (k), so substituted, the following shall be inserted, namely:-

"(l) "Transferred Development Rights Certificate"' (TDRC) means the certificate of Development Rights transferred by the DRC holder as TDR. TDRC shall also be issued for the TDR transferred by any subsequent TDRC holder."

**4. Amendment of section 17.-** In the the Principal Act, in section 17,-

(1) for sub-section (2-C), the following shall be substituted, namely:-

"(2-C) The Planning Authority, if a person so desires, may also permit the release of sites in two stages. In such a case, the Planning Authority on approval of the provisional layout plan release forty percent of the sites in the layout in the first stage and shall release the remaining sixty percent of the sites on completion of all development works in the following manner, namely:-

(i) On approval of the provisional layout plan in the prescribed manner before releasing forty percent of sites, the Planning Authority shall,-

(a) obtain the registered relinquishment deed, in the prescribed form, from the applicant to relinquish the areas reserved and demarcated for park, playground and the roads in the layout to the Local Authority and the area

reserved and demarcated for civic amenities to the Planning Authority without claiming any compensation;

(b) shall also obtain the registered mortgage agreement of all the corner sites in the layout to the Planning Authority; and

(c) ensure that the project is registered under the Real Estate (Regulation and Development) Act, 2016 (Central Act 16 of 2016).

(ii) After obtaining above documents the planning Authority shall release forty percent of the sites scattered in the layout showing the building sites released affixing the seal of the Authority on the provisionally approved layout plan which shall be sent to the Local Authority for issue of khata of such sites for registration purpose under the Karnataka Stamps Act, 1957 (Karnataka Act 34 of 1957) and the Registration Act, 1908 (Central Act XVI of 1908).

(iii) The Planning Authority shall ensure the completion of all development works including all infrastructure facilities as specified under sub-section (2-A), on conducting inspection by the concerned Authority or Agency or Department within three years from the date of approval of the provisional layout plan. In case the completion certificates for completion of all development works are not obtained within three years from the date of approval of the provisional layout plan, the Planning Authority may for the reasons to be recorded extend the period for completion of development by a further period of one year.

(iv) On completion of all development works and obtaining the completion certificates within three years or within the extended period and obtaining the certificate of completion from the concerned Authority or Agency or Department including the development of the park, playground and civic amenity sites, the Planning Authority shall approve the final layout plan releasing the remaining sixty percent of the sites along with the corner sites mortgaged to the Authority. A copy of the finally approved layout plan, affixing the seal of the Planning Authority, showing the building sites released shall be sent to the Local Authority for issue of khata of such sites for registration purpose under the Karnataka Stamps Act, 1957 (Karnataka Act 34 of 1957) and the Registration Act, 1908 (Central Act XVI of 1908):

Provided that, in case the development works are not completed within the period specified under clause (iii), the corner sites mortgaged to the Planning Authority shall be forfeited to the Planning Authority".

(2) After sub-section (2-C), so substituted, the following shall be inserted, namely:-

"(2-D). In case of layout provisionally approved under sub-section (2-B), the development works specified under sub-section (2-A) shall be completed within a period of three years from the date of approval of the provisional layout plan:

Provided that, the Planning Authority may, on application made in this behalf, for reasons to be recorded in writing, extend the period for development of the layout to such further period not extending one year, as it considers necessary. In case the development works are not completed within such specified period, the permission granted by the Planning Authority shall lapse. The applicant shall thereafter seek fresh approval following due procedure.

(2-E). Any building site which has not been released by the Planning Authority under this Act shall not be issued any Khata or given property index number (e-khata) under the Karnataka Municipalities Act, 1964 (Karnataka Act 22 of 1964), the Karnataka Municipal Corporations Act, 1976 (Karnataka Act 14 of 1976), the Karnataka Gram Swaraj and Panchayat Raj Act, 1993 (Karnataka Act 14 of 1993)or the Bruhat Bengaluru Mahanagara Palike Act, 2020 (Karnataka Act 53 of 2020) as the case may be".

**5. Repeal and savings.-** (1) The Karnataka Town and Country Planning (Amendment) Ordinance, 2021 (Karnataka Ordinance 06 of 2021) and the Karnataka Town and Country Planning (Second Amendment) Ordinance, 2021 (Karnataka Ordinance 07 of 2021) are hereby repealed.

(2) Notwithstanding such repeal, anything done or any action taken under the principal Act, as amended by the said Ordinances, shall be deemed to have been done or taken under the Principal Act, as amended by this Act.

By Order and in the name of
**the Governor of Karnataka,**

**G. SRIDHAR**
Secretary to Government
Department of Parliamentary Affairs
and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 36 ಶಾಸನ 2021, ಬೆಂಗಳೂರು, ದಿನಾಂಕ:07.10.2021**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ The Karnataka Town and Country Planning (Amendment) Act, 2021 (Karnataka Act 31 of 2021) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 31**

(2021 ರ ಅಕ್ಟೋಬರ್ ತಿಂಗಳ **7**ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2021**

(2021 ರ ಅಕ್ಟೋಬರ್ ತಿಂಗಳ **5**ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ **ಅಧಿನಿಯಮ**, 1961**ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು** ಅಧಿನಿಯಮ.

**ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) **ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ**;

**ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ**:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ **ಅಧಿನಿಯಮ**ವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) **ಅಧಿನಿಯಮ**, 2021 ಎಂದು ಕರೆಯತಕ್ಕದ್ದು.

(2) 2 ಮತ್ತು 3ನೇ ಪ್ರಕರಣಗಳು 12ನೇ ಆಗಸ್ಟ್, 2021 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು, 4ನೇ ಪ್ರಕರಣವು 5ನೇ ಜುಲೈ 2021 ರಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಇನ್ನುಳಿದ ಉಪಬಂಧಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 4-ಐ, 4-ಜೆ ಮತ್ತು 4-ಕೆ ಹೊಸ ಪ್ರಕರಣಗಳ ಸೇರ್ಪಡೆ.-** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963 ಕರ್ನಾಟಕ ಅಧಿನಿಯಮ 11) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 4-ಹೆಚ್ ಪ್ರಕರಣದ ತರುವಾಯ ಈ ಕೆಳಕಂಡವುಗಳನ್ನು ಸೇರಿಸತಕ್ಕದ್ದು, ಎಂದರೆ:-

"**4-ಐ. ಸ್ಥಳೀಯ ಪ್ರಾಧಿಕಾರಕ್ಕಾಗಿ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿಕಾರಿ.-** (1) 2ನೇ ಪ್ರಕರಣದ (7)ನೇ ಖಂಡದ (ಬಿ) ಉಪಖಂಡದಲ್ಲಿ ಪರಿಭಾಷಿಸಲಾದ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರವನ್ನು ರಚಿಸುವ ಸಮಯದಲ್ಲಿ, ರಾಜ್ಯ ಸರ್ಕಾರವು ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ನಿರ್ದೇಶಕರೊಂದಿಗೆ ಸಮಾಲೋಚಿಸಿ, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆಯಿರದ, ನಗರ ಯೋಜನೆಯಲ್ಲಿ ಸ್ನಾತಕ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರುವ ಒಬ್ಬ ಅಧಿಕಾರಿಯನ್ನು, ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿಯಾಗಿ ಗೊತ್ತುಪಡಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಲಾದ ಅಧಿಕಾರಿಯು ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ನಿರ್ದೇಶಕರ ಅಧೀನದಲ್ಲಿರತಕ್ಕದ್ದು ಮತ್ತು (3)ನೇ ಹಾಗೂ (4)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಹಾಗೂ ನಿರ್ದೇಶಕರ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟು ಯೋಜನಾ ಪ್ರಾಧಿಕಾರದ ಪ್ರಕಾರ್ಯಗಳನ್ನು ಸಮನ್ವಯಗೊಳಿಸತಕ್ಕದ್ದು ಹಾಗೂ ನೆರವು ನೀಡತಕ್ಕದ್ದು.

(3) ಗೊತ್ತುಪಡಿಸಿದ ಅಧಿಕಾರಿಯು ಅಧಿನಿಯಮದ 5ನೇ ಪ್ರಕರಣದಿಂದ 13ನೇ ಪ್ರಕರಣಗಳಿಗೆ ಸಂಬಂಧಿಸಿದಂತೆ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಗೊತ್ತುಪಡಿಸಿದ ಅಧಿಕಾರಿಯು ಯೋಜನಾ ಪ್ರದೇಶದ ಸರ್ವೆಕಾರ್ಯ ಕೈಗೊಂಡು, ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಅಸ್ತಿತ್ವದಲ್ಲಿರುವ ಭೂ-ಬಳಕೆ ನಕ್ಷೆ ಮತ್ತು ಮಾಸ್ಟರ್ ಪ್ಲಾನನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಯೋಜನಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(5) ಮಾಸ್ಟರ್ ಪ್ಲಾನ್ ತಯಾರಿಸುವುದಕ್ಕಾಗಿ ತಗುಲಿದ ವೆಚ್ಚವನ್ನು ಅಧಿನಿಯಮದ 68-ಎ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಸ್ಥಳೀಯ ಪ್ರಾಧಿಕಾರದಿಂದ ಭರಿಸತಕ್ಕದ್ದು.

**4-ಜೆ. ಯೋಜನಾ ಪ್ರಾಧಿಕಾರದ ಪ್ರಕಾರ್ಯಗಳು.-** (1) ಯೋಜನಾ ಪ್ರಾಧಿಕಾರದ ಪ್ರಕಾರ್ಯಗಳು ಈ ಕೆಳಕಂಡಂತೆ ಇರತಕ್ಕದ್ದು, ಎಂದರೆ:-

(i) ಯೋಜನೆಯನ್ನು ಸಿದ್ಧಪಡಿಸುವುದು, ಭೂ ಬಳಕೆಯನ್ನು ಒಳಗೊಂಡಂತೆ, ಕ್ರಮಬದ್ಧವಾಗಿ ನಗರ ಮತ್ತು ಗ್ರಾಮೀಣ ಪ್ರದೇಶದ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು ಮತ್ತು ನಿಯಂತ್ರಿಸುವುದು;

(ii) ಮಾಸ್ಟರ್ ಪ್ಲಾನಿನ ಪ್ರಸರಣ, ತಯಾರಿಕೆ ಮತ್ತು ಅನುಷ್ಠಾನ; ಮತ್ತು

(iii) ಪಟ್ಟಣ ಯೋಜನಾ ಸ್ಕೀಮ್ ಗಳನ್ನು ಮತ್ತು ಅಭಿವೃದ್ಧಿ ಸ್ಕೀಮ್ ಗಳನ್ನು ತಯಾರಿಸುವುದು ಮತ್ತು ಕಾರ್ಯಗತಗೊಳಿಸುವುದು ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಅಭಿವೃದ್ಧಿಯನ್ನು ಸುಭದ್ರಗೊಳಿಸುವುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು, ಸ್ಥಳೀಯ ಯೋಜನಾ ಪ್ರದೇಶದೊಳಗಿನ ಚರ ಮತ್ತು ಸ್ಥಿರ ಸ್ವತ್ತನ್ನು ಅಧ್ಯಯನ ಮತ್ತು ಸರ್ವೆ ಕಾರ್ಯ ಕೈಗೊಳ್ಳಲು, ಆರ್ಜಿಸಲು, ಧಾರಣ ಮಾಡಲು, ನಿರ್ವಹಿಸಲು ಮತ್ತು ವಿಲೇ ಮಾಡಲು, ಕೈಗೊಳ್ಳುವ ಅಧಿಕಾರವನ್ನು ಯೋಜನಾ ಪ್ರಾಧಿಕಾರವು ಹೊಂದಿರತಕ್ಕದ್ದು.

**4-ಕೆ. ಸ್ಥಳೀಯ ಯೋಜನಾ ಪ್ರದೇಶವನ್ನು ಹೊರತುಪಡಿಸಿದ ಪ್ರದೇಶದಲ್ಲಿ ಭೂ-ಅಭಿವೃದ್ಧಿ.-** (1) 4-ಎ ಪ್ರಕರಣದಡಿಯಲ್ಲಿ ಅಧಿಸೂಚಿಸಲಾದಂತೆ ಸ್ಥಳೀಯ ಯೋಜನಾ ಪ್ರದೇಶವನ್ನು ಹೊರತುಪಡಿಸಿದ ಯಾವುದೇ ಭೂಮಿಯ ಮೇಲೆ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಿರುವ ಯಾರೇ ವ್ಯಕ್ತಿಯು, ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಿರುವ ಹಾಗೂ ಅಂಥ ದಸ್ತಾವೇಜುಗಳೊಂದಿಗೆ ಅನುಮತಿಗಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು;

(2) ಸ್ಥಳೀಯ ಪ್ರಾಧಿಕಾರವು (1)ನೇ ಉಪಪ್ರಕರಣದ ಮೇರೆಗೆ ಅನುಮತಿ ನೀಡುವ ಮೊದಲು ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಅಥವಾ ಅವರಿಂದ ಅಧಿಕೃತಗೊಂಡ ನಗರ ಯೋಜನೆ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಯಾರೇ ಅಧೀನ ಅಧಿಕಾರಿಯ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

(3) ರಾಜ್ಯ ಸರ್ಕಾರವು ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರೊಂದಿಗೆ ಸಮಾಲೋಚಿಸಿ ಅಂಥ ಪ್ರದೇಶಗಳಲ್ಲಿ ಉದ್ಯಾನವನಗಳು, ನಾಗರಿಕ ಸೌಕರ್ಯಗಳು ಹಾಗೂ ಉಪಯುಕ್ತತೆಗಳಿಗಾಗಿ ಸ್ಥಳವನ್ನು ಗುರುತಿಸುವುದನ್ನು ಸೇರಿದಂತೆ ಅಭಿವೃದ್ಧಿಗಾಗಿ ವಿನಿಯಮಗಳನ್ನು ಅಧಿಸೂಚಿಸತಕ್ಕದ್ದು.

(4) ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಅಂಥ ಅಭಿವೃದ್ಧಿಗಳ ನಿಯಂತ್ರಣಕ್ಕಾಗಿ ನಗರ ಯೋಜನೆಯ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆಯಿರದ ತನ್ನ ಅಧೀನ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು.

(5) (3)ನೇ ಉಪಪ್ರಕರಣದ ಮೇರೆಗೆ ಸರ್ಕಾರವು ಅಧಿಸೂಚಿಸಿದ ವಿನಿಯಮಗಳು ಅಂಥ ಪ್ರದೇಶದಲ್ಲಿನ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಗೆ ಅನ್ವಯವಾಗತಕ್ಕದ್ದು.

(6) ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಅಭಿವೃದ್ಧಿಗಾಗಿನ ಶುಲ್ಕವನ್ನು ವಿಧಿಸಬಹುದು;

(7) (6)ನೇ ಉಪಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ಶುಲ್ಕವನ್ನು ರಾಜ್ಯ ಸಂಚಿತ ನಿಧಿಗೆ ಜಮೆ ಮಾಡತಕ್ಕದ್ದು.

(8) 4-ಎ ಪ್ರಕರಣದ ಮೇರೆಗೆ ಯೋಜನಾ ಪ್ರದೇಶಗಳನ್ನು ಘೋಷಿಸಿರುವ ಕಡೆಗಳಲ್ಲಿ, 4-ಸಿ ಪ್ರಕರಣದ ಮೇರೆಗೆ ಯೋಜನಾ ಪ್ರಾಧಿಕಾರವನ್ನು ರಚಿಸುವವರೆಗೆ, ಸ್ಥಳೀಯ ಪ್ರಾಧಿಕಾರವು (1)ನೇ

ಉಪ-ಪ್ರಕರಣದ ಮೇರೆಗೆ ಅನುಮತಿ ನೀಡುವ ಮೊದಲು ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಅಥವಾ ಅವರಿಂದ ಅಧಿಕೃತಗೊಂಡ ನಗರ ಯೋಜನೆಯ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆಯಿರದ ಯಾರೇ ಅಧೀನ ಅಧಿಕಾರಿಯ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

(9) ಯಾವುದೇ ಭೂ ಅಭಿವೃದ್ಧಿ ಕಾರ್ಯವನ್ನು,-

(ಎ) ಈ ಪ್ರಕರಣದ ಮೇರೆಗೆ ಅನುಮತಿ ಪಡೆಯದೆ; ಮತ್ತು

(ಬಿ) ನೀಡಲಾದ ಯಾವುದೇ ಅನುಮತಿಯನ್ನು ಅಥವಾ ಯಾವ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆಯೋ ಆ ಯಾವುದೇ ಷರತ್ತನ್ನು ಉಲ್ಲಂಘಿಸಿ,-

- ಕೈಗೊಂಡಲ್ಲಿ, ಸ್ಥಳೀಯ ಪ್ರಾಧಿಕಾರವು ಸೂಕ್ತ ಕ್ರಮವನ್ನಾರಂಭಿಸಲು ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕಾನೂನುಗಳ ಅಡಿಯಲ್ಲಿರುವಂತೆ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(10) 4-ಎ ಪ್ರಕರಣದ ಅಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸದಿರುವ ಅಂಥ ಪ್ರದೇಶಗಳಲ್ಲಿ,-

(ಎ) ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯು ಸರ್ಕಾರವು ಅಧಿಸೂಚಿಸಿದಂತೆ, ಈ ಅಧಿನಿಯಮ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಉಪಬಂಧಗಳ ಅಡಿಯಲ್ಲಿ, ಅಭಿವೃದ್ಧಿಗಾಗಿ ಗ್ರಾಮ ವಿಸ್ತರಣಾ ಯೋಜನೆಯನ್ನು ಮತ್ತು ಭೂ ಬಳಕೆಗಳ ಪರಿವರ್ತನೆಗಾಗಿ ತಮ್ಮ ಅಭಿಪ್ರಾಯವನ್ನು ನೀಡತಕ್ಕದ್ದು;

(ಬಿ) ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಅಥವಾ ಅವರಿಂದ ಅಧಿಕೃತಗೊಂಡ, ನಗರ ಯೋಜನೆ ಸಹಾಯಕ ನಿರ್ದೇಶಕರ ದರ್ಜೆಗಿಂತ ಕಡಿಮೆಯಿರದ, ನಗರ ಯೋಜನೆಯಲ್ಲಿ ಸ್ನಾತಕ ಪದವಿ ಅಥವಾ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಅಧಿಕಾರಿಯು, ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಮೂಲಕ ಅಥವಾ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿಸಲಾದ ರಾಜ್ಯ ಅಥವಾ ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಮಂಡಳಿ, ಪ್ರಾಧಿಕಾರ ಅಥವಾ ನಿಕಾಯವು ಕೋರುವ, ರಾಜ್ಯ ಅಥವಾ ಕೇಂದ್ರ ಸರ್ಕಾರದ ಯಾವುದೇ ಯೋಜನೆಗಳಿಗಾಗಿ ಅಧಿಸೂಚಿಸಿದ ಸ್ಥಳೀಯ ಯೋಜನಾ ಪ್ರದೇಶವು ಘೋಷಣೆಯಾಗದಿರುವ ಪ್ರದೇಶಗಳಿಗೆ ಕಡ್ಡಾಯಗೊಳಿಸಿರುವಂತೆ ಗ್ರಾಮೀಣ ಅಥವಾ ಭೂ ಕಂದಾಯ ವ್ಯವಸ್ಥೆ ವಿಸ್ತರಣಾ ಯೋಜನೆಯನ್ನು ಸಿದ್ಧಪಡಿಸಬಹುದು."

**3. 14ಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 14ಬಿ ಪ್ರಕರಣದಲ್ಲಿ,-

(1) (1)ನೇ ಉಪ-ಪ್ರಕರಣದಲ್ಲಿ,-

(ಎ) "ಅಂಥ ವ್ಯಕ್ತಿಗಳಿಗೆ" ಎಂಬ ಪದಗಳ ತರುವಾಯ "ಕಾಲ್ಪನಿಕ ಭೂಮಿಯ ರೂಪದಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಎಎ) ಈ ಮುಂದಿನದನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:-

"ಬಿಟ್ಟುಕೊಟ್ಟ ನಂತರ ಉಳಿಯುವ ನಿವೇಶನವು ವಿನಿಯಮದ ಪ್ರಕಾರ ಮೂಲ ನಿವೇಶನ ಅಥವಾ ಭೂಮಿ ಬಿಟ್ಟುಕೊಡುವುದಕ್ಕೆ ಮುಂಚೆ ಲಭ್ಯವಿದ್ದಂತಹ ನೆಲ ವಿಸ್ತೀರ್ಣವನ್ನೇ ಹೊಂದಿರತಕ್ಕದ್ದು."

(ಬಿ) (1)ನೇ ಉಪ-ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ದಿನಾಂಕ:03.06.2004ಕ್ಕಿಂತ ಮುಂಚೆ ಮೇಲಿನ ವಿಧಾನದಲ್ಲಿ ಬಿಟ್ಟುಕೊಡಲಾದ ಯಾವುದೇ "ಪ್ರದೇಶ"ವು ಅಭಿವೃದ್ಧಿ ಹಕ್ಕುಗಳಿಗಾಗಿ ಅರ್ಹವಾಗಿರತಕ್ಕದ್ದಲ್ಲ."

(2) (3)ನೇ ಉಪ-ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಸಾರ್ವಜನಿಕ ಪ್ರಾಧಿಕಾರವು ಅಗತ್ಯವಿರುವ ಭೂಮಿಯ ಮಾರುಕಟ್ಟೆ ಮೌಲ್ಯದ ಶೇಕಡ ಒಂದಕ್ಕೆ ಸಮಾನವಾದ ಮೊತ್ತವನ್ನು ಸ್ಥಳೀಯ ಪ್ರಾಧಿಕಾರದಲ್ಲಿ ಠೇವಣಿ ಮಾಡಿದ ಹೊರತು, ಈ ಪ್ರಕರಣದ ಅಡಿಯಲ್ಲಿ ಯಾವುವೇ ಅಭಿವೃದ್ಧಿ ಹಕ್ಕುಗಳನ್ನು ಮಂಜೂರು ಮಾಡತಕ್ಕದ್ದಲ್ಲ:

ಪರಂತು, ಕೈಗೆಟಕುವ ಬೆಲೆಯ ವಸತಿ ಯೋಜನೆಗಳ ಅಭಿವೃದ್ಧಿ, ಕೊಳಚೆ ಪ್ರದೇಶ ಪುನರಾಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ರಾಜ್ಯ ಅಥವಾ ಕೇಂದ್ರ ಸರ್ಕಾರದ ಏಜೆನ್ಸಿಗಳಿಗೆ, ಸ್ಥಳೀಯ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರಕ್ಕೆ ಅಂಥ ಠೇವಣಿ ಮಾಡುವುದರಿಂದ ವಿನಾಯಿತಿಗೊಳಿಸಲಾಗಿದೆ. "

(3) (4)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(4) ಸಾರ್ವಜನಿಕ ಪ್ರಾಧಿಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಖರೀದಿಸಲು ಉದ್ದೇಶಿಸಿದ್ದಲ್ಲಿ, ಅದು ಈ ಮುಂದಿನವುಗಳಿಗಾಗಿ ನೇಮಿಸಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು,-

(i) ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಮತ್ತು ಎರಡು ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಆರ್ಥಿಕ ಪರಿಹಾರಕ್ಕೆ ಬದಲಾಗಿ ಅಭಿವೃದ್ಧಿ ಹಕ್ಕುಗಳನ್ನು ಪಡೆಯುವ ಮೂಲಕ ಭೂಮಿಯನ್ನು ಬಿಟ್ಟುಕೊಡಲು ಭೂಮಿಯ ಮಾಲೀಕರುಗಳಿಂದ ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಂದ ಒಪ್ಪಿಗೆ ಅಥವಾ ಆಕ್ಷೇಪಣೆಯನ್ನು ಕೋರಿ ಭೂಮಿಯ ವಿವರಗಳನ್ನು ಅಧಿಸೂಚಿಸುವುದು;

(ii) ಅಭಿವೃದ್ಧಿ ಹಕ್ಕುಗಳನ್ನು ಪಡೆಯುವುದರ ಮೂಲಕ ಭೂಮಿಯನ್ನು ಬಿಟ್ಟುಕೊಡಲು ಮಾಲೀಕರ ಒಪ್ಪಿಗೆಯನ್ನು ಪಡೆಯುವುದು;

(iii) ತಾತ್ಕಾಲಿಕ ಅಂಗೀಕಾರ ಆದೇಶವನ್ನು ಹೊರಡಿಸುವುದು ಮತ್ತು ಮಾಲೀಕರು ಬಿಟ್ಟುಕೊಡಲು ಒಪ್ಪಿದ ಭೂಮಿಯ ಭೌತಿಕ ಸ್ವಾಧೀನವನ್ನು ಪಡೆಯುವುದು;

(iv) ಸಾರ್ವಜನಿಕ ಪ್ರಾಧಿಕಾರದ ಹೆಸರಿಗೆ ಬಿಟ್ಟುಕೊಡುವ ಪತ್ರವನ್ನು ಮಾಡಿಕೊಳ್ಳುವುದು ಮತ್ತು ನೋಂದಾಯಿಸಿಕೊಳ್ಳುವುದು;

(V) ಯಾವುದೇ ಸಾರ್ವಜನಿಕ ಪ್ರಾಧಿಕಾರ ಅಥವಾ ಯೋಜನಾ ಪ್ರಾಧಿಕಾರವು, ಈ ಸಂಬಂಧದಲ್ಲಿ ಯಾವುದೇ ಪರಿಹಾರವನ್ನು ಅಥವಾ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರವನ್ನು ನೀಡಿರುವುದಿಲ್ಲವೆಂದು, ಬಿಟ್ಟುಕೊಡಲಾದ ಪ್ರದೇಶದ ಮಾಲೀಕರುಗಳಿಗೆ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ ನೀಡುವಂತೆ ಯೋಜನಾ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು:

ಪರಂತು (i)ನೇ ಖಂಡದ ಅಡಿಯಲ್ಲಿ ಅಧಿಸೂಚಿಸಿದ ಭೂಮಿಯ ಉಳಿಕೆ ಭಾಗವು ಭೂ ಮಾಲೀಕ ಅಥವಾ ಹಿತಾಸಕ್ತಿಯುಳ್ಳ ವ್ಯಕ್ತಿಗಳ ಪ್ರಯೋಜನಕಾರಿ ಬಳಕೆಗಾಗಿ ಯೋಗ್ಯವಾಗಿಲ್ಲವೆಂದು ಅದನ್ನು ಬಿಟ್ಟುಕೊಡಲು ಅವರು ಕ್ಲೇಮನ್ನು ಸಲ್ಲಿಸಿದ ಸಂದರ್ಭದಲ್ಲಿ, ಸಾರ್ವಜನಿಕ ಪ್ರಾಧಿಕಾರವು, ಭೂಮಿಯ ಉಳಿಕೆ ಭಾಗವನ್ನು ಖರೀದಿಸಲು ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಸೂಕ್ತ ಆದೇಶವನ್ನು ಹೊರಡಿಸತಕ್ಕದ್ದು ಹಾಗೂ ಭೂ ಮಾಲೀಕರಿಂದ ನೋಂದಾಯಿತ ಬಿಟ್ಟುಕೊಡುವ ಪತ್ರಗಳನ್ನು ಪಡೆಯತಕ್ಕದ್ದು."

(3ಎ) (5)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(5) ಸಾರ್ವಜನಿಕ ಪ್ರಾಧಿಕಾರದಿಂದ ಶಿಫಾರಸ್ಸನ್ನು ಸ್ವೀಕರಿಸಿದ ತರುವಾಯ ಯೋಜನಾ ಪ್ರಾಧಿಕಾರವು ಅದನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಈ ಮುಂಚೆ ಆ ಭೂ ಪ್ರದೇಶದ ಭಾಗಕ್ಕೆ ಯಾವುದೇ ಯೋಜನಾ ಪ್ರಾಧಿಕಾರದಿಂದ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು

(ಟಿಡಿಆರ್) ನೀಡಲಾಗಿಲ್ಲವೇ ಎಂಬುದನ್ನು ಪರಿಶೀಲಿಸಿದ ನಂತರ, ನಿಯಮಿಸಬಹುದಾದಂಥ ನಿಬಂಧನೆಗಳು ಹಾಗೂ ಷರತ್ತುಗಳಿಗೊಳಪಟ್ಟು, ಕಾಲ್ಪನಿಕ ಭೂ ವಿಸ್ತೀರ್ಣವನ್ನು ನಿರ್ದಿಷ್ಟಪಡಿಸಿ ಸಾರ್ವಜನಿಕ ಪ್ರಾಧಿಕಾರಕ್ಕೆ ಮಾಹಿತಿ ನೀಡಿದ ಮೇರೆಗೆ ಅಂಗೀಕಾರಾರ್ಹವಾದ ಅಭಿವೃದ್ಧಿ ಹಕ್ಕುಗಳ ರೂಪದಲ್ಲಿ ಭೂ ಮಾಲೀಕರಿಗೆ ನಿಯಮಿಸಲಾದ ನಮೂನೆಯಲ್ಲಿ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರವನ್ನು ನೀಡತಕ್ಕದ್ದು. (4)ನೇ ಉಪಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರದ ಕ್ರಮದಿಂದ ಉದ್ಭವಿಸುವ ಅಭಿವೃದ್ಧಿ ಹಕ್ಕು ನೀಡಿಕೆಗೆ ಸಂಬಂಧಿಸಿದ ಯಾವುದೇ ಹೊಣೆಗಾರಿಕೆಯು ಸಾರ್ವಜನಿಕ ಪ್ರಾಧಿಕಾರಕ್ಕೆ ಸೀಮಿತವಾಗತಕ್ಕದ್ದು ಹಾಗೂ ಯೋಜನಾ ಪ್ರಾಧಿಕಾರವು ಅದಕ್ಕಾಗಿ ಜವಾಬ್ದಾರಿಯಾಗತಕ್ಕದ್ದಲ್ಲ."

(4) (9)ನೇ ಉಪ ಪ್ರಕರಣವನ್ನು ಬಿಟ್ಟು ಬಿಡತಕ್ಕದ್ದು.

(4ಎ) (10)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಸಾರ್ವಜನಿಕ ಪ್ರಾಧಿಕಾರವು ಮೇಲೆ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಅಥವಾ ಹೆಚ್ಚು ಮುಂಚಿತವಾಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಭೂಮಿಯನ್ನು ಸ್ವಾಧೀನಕ್ಕೆ ಪಡೆದಿರುವ ಆದರೆ ಸದರಿ ತಿದ್ದುಪಡಿ ಅಧಿನಿಯಮದ ಪ್ರಾರಂಭದ ವರೆಗೆ ಯಾವುದೇ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ ನೀಡದಿರುವ ಪ್ರಕರಣಗಳಲ್ಲಿ ಅಂಥ ಖರೀದಿ ಪ್ರಕ್ರಿಯೆಗಳಲ್ಲಿ ಭೂಮಿಯ ಮಾಲೀಕರುಗಳು ಸದರಿ ತಿದ್ದುಪಡಿ ಅಧಿನಿಯಮದ ಪ್ರಕಾರ ಅಭಿವೃದ್ಧಿ ಹಕ್ಕುಗಳ ಪ್ರಯೋಜನವನ್ನು ಪಡೆಯಲಿಕ್ಕೆ ಅರ್ಹರಾಗಿರತಕ್ಕದ್ದು."

(5) (13)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(13) ಮಾಲೀಕನು ಅಭಿವೃದ್ಧಿ ಹಕ್ಕುಗಳನ್ನು ಅದೇ ಪ್ಲಾಟಿನ ಒಳಗಾಗಲಿ ಅಥವಾ ಅದೇ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಯಾವುದೇ ಇತರೆ ಪ್ರದೇಶದ ಒಳಗಾಗಲಿ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಬಳಸಬಹುದು ಅಥವಾ ಅಂಥ ಅಭಿವೃದ್ಧಿ ಹಕ್ಕುಗಳ ಮಾಲೀಕನು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳಾಗಿ ಒಬ್ಬ ವರ್ಗಾವಣೆಧಾರಕನಿಗೆ (transferee) ಅಭಿವೃದ್ಧಿ ಹಕ್ಕುಗಳನ್ನು ವರ್ಗಾಯಿಸಬಹುದು, ಅದನ್ನು ಸ್ಥಳೀಯ ಯೋಜನಾ ಪ್ರದೇಶದೊಳಗೆ ನಿಯಮಿಸಲಾದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಯಾವುದೇ ಪ್ರದೇಶದಲ್ಲಿ ಮಾರಾಟ ಮಾಡಬಹುದು ಅಥವಾ ಬಳಸಿಕೊಳ್ಳಬಹುದು."

(6) (19)ನೇ ಉಪಪ್ರಕರಣದಲ್ಲಿ,-

(ಎ) "ಯೋಜನಾ ಪ್ರಾಧಿಕಾರದ" ಎಂಬ ಪದಗಳ ತರುವಾಯ "ಮತ್ತು ಸಾರ್ವಜನಿಕ ಪ್ರಾಧಿಕಾರದ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) "ವ್ಯವಹರಣೆಗಳಿಗಾಗಿ" ಎಂಬ ಪದದ ತರುವಾಯ "ಮತ್ತು ರಾಜ್ಯದಲ್ಲಿ ಅಭಿವೃದ್ಧಿ ಹಕ್ಕುಗಳು ಅಥವಾ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳ ಸ್ಟಾಕಿಂಗ್, ಬ್ಯಾಂಕಿಂಗ್ ಮತ್ತು ವಹಿವಾಟು ನಡೆಸುವುದಕ್ಕಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(7) (22)ನೇ ಉಪ-ಪ್ರಕರಣದಲ್ಲಿ "ಯೋಜನಾ ಪ್ರಾಧಿಕಾರದ ಯಾವುದೇ ಆದೇಶದಿಂದ" ಎಂಬ ಪದಗಳ ಬದಲಿಗೆ "ಸಾರ್ವಜನಿಕ ಪ್ರಾಧಿಕಾರ ಅಥವಾ ಯೋಜನಾ ಪ್ರಾಧಿಕಾರದ ಯಾವುದೇ ತೀರ್ಮಾನದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(8) (24)ನೇ ಉಪ-ಪ್ರಕರಣದಲ್ಲಿ "ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯು" ಎಂಬ ಪದಗಳ ತರುವಾಯ "ಅಥವಾ ಸಂದರ್ಭಾನುಸಾರ, ಯೋಜನಾ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು.

(9) ಕೋಷ್ಟಕ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**ಕೋಷ್ಟಕ**

**[(1)ನೇ ಉಪಪ್ರಕರಣವನ್ನು ನೋಡಿ]**

**ಅಂಗೀಕಾರಾರ್ಹವಾದ ಅಭಿವೃದ್ಧಿ ಹಕ್ಕುಗಳ ಪ್ರಮಾಣ**

| ಕ್ರ. ಸಂ. | ಬಿಟ್ಟುಕೊಡಲಾದ ಪ್ರದೇಶ | ಅಂಗೀಕಾರಾರ್ಹವಾದ ಅಭಿವೃದ್ಧಿ ಹಕ್ಕುಗಳು |
|---|---|---|
| 1. | **ಭೂಮಿ ಅಭಿವೃದ್ಧಿ ಹಕ್ಕುಗಳು** | |
| | (i) ಮಾಸ್ಟರ್ ಪ್ಲಾನ್ ನಲ್ಲಿ ಪ್ರಸ್ತಾವಿಸಲಾದಂತೆ ಅಥವಾ ಸ್ಥಳೀಯ ಪ್ರಾಧಿಕಾರವು ಅಥವಾ ಅಭಿವೃದ್ಧಿ ಪ್ರಾಧಿಕಾರವು ಪ್ರಸ್ತಾವಿಸಲಾದಂತೆ ಯಾವುದೇ ರಸ್ತೆಯ ಅಗಲೀಕರಣ/ಯಾವುದೇ ರಸ್ತೆ ನಿರ್ಮಾಣ<br><br>(ii) ಸರ್ಕಾರವು ಅನುಮೋದಿಸಿದ ಯಾವುವೇ ಮೂಲ ಸೌಕರ್ಯ ಯೋಜನೆಗಳು (ಸಾರಿಗೆ, ನೀರು ಸರಬರಾಜು, ಚರಂಡಿ, ವಿದ್ಯುಚ್ಛಕ್ತಿ ಇತ್ಯಾದಿ.)<br><br>(iii) ಮಾಸ್ಟರ್ ಪ್ಲಾನಿನಲ್ಲಿ ಪ್ರಸ್ತಾವಿಸಲಾದ ಅಥವಾ ಸ್ಥಳೀಯ ಪ್ರಾಧಿಕಾರವು ಮತ್ತು ಖಾಸಗಿ ಭೂಮಿಯ ಮೇಲೆ ಮರುಅಭಿವೃದ್ಧಿ ಯೋಜನೆಗಳು ಪ್ರಸ್ತಾವಿಸಿದ ಪಾರ್ಕಿಂಗ್, ಉದ್ಯಾನಗಳು, ಆಟದ ಮೈದಾನಗಳು ಮತ್ತು ಮುಕ್ತ ಸ್ಥಳಗಳು ಅಥವಾ ಯಾವುವೇ ಇತರ ಸಾರ್ವಜನಿಕ ಸ್ಥಳಗಳನ್ನು ಒದಗಿಸುವುದು.<br><br>(iv) ಖಾಸಗಿ ಭೂಮಿಯ ಮೇಲೆ ಇಡಬ್ಲ್ಯೂಎಸ್/ಎಲ್ಐಜಿ/ಕೈಗೆಟಕುವ ವಸತಿ/ಕೊಳಚೆ ಪ್ರದೇಶ ಮರು ಅಭಿವೃದ್ಧಿ ಯೋಜನೆಯನ್ನು ಒದಗಿಸುವುದು.<br><br>(v) ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸುವ ಯಾವುದೇ ಇತರ ಸಾರ್ವಜನಿಕ ಉದ್ದೇಶ. | ಅಭಿವೃದ್ಧಿ ಹಕ್ಕು ಕಾಲ್ಪನಿಕ ಭೂಮಿಯ ರೂಪದಲ್ಲಿದ್ದು, ಅದು ಬಿಟ್ಟು ಕೊಡಲಾದ ಪ್ರದೇಶದ ಎರಡರಷ್ಟು ಪ್ರದೇಶಕ್ಕೆ ಸಮನಾಗಿರತಕ್ಕದ್ದು. |

| 2. | **ಕಟ್ಟಡ ಅಭಿವೃದ್ಧಿ ಹಕ್ಕುಗಳು** | |
|---|---|---|
| ಎ. | ಎಲ್ಲ ವಿಧದ ಕಟ್ಟಡಗಳು. (ಅಂಥ ಕಟ್ಟಡ ಪ್ರದೇಶಕ್ಕಾಗಿ ಅಭಿವೃದ್ಧಿ ಹಕ್ಕುಗಳ ಪ್ರಮಾಣಕ್ಕೆ ಪರಿಗಣಿಸಿದ ಪ್ರದೇಶವು ಅನುಮತಿಸಬಹುದಾದ ನೆಲ ಪ್ರದೇಶದ ಅನುಪಾತಕ್ಕೆ (FAR) ಸೀಮಿತಗೊಳಿಸಿ ಬಿಟ್ಟುಕೊಡಲಾದ ಪ್ರದೇಶವಾಗಿರತಕ್ಕದ್ದು.) | "ಕಾಲ್ಪನಿಕ ಭೂಮಿಯ" ರೂಪದಲ್ಲಿರುವ ಅಭಿವೃದ್ಧಿ ಹಕ್ಕುಗಳು, ಬಿಟ್ಟುಕೊಡಲಾದ ಕಟ್ಟಡದ/ಅದರ ಭಾಗದ ಮೌಲ್ಯವನ್ನು, ಕಟ್ಟಡ ಇರುವ ಭೂಮಿಯ/ಪ್ಲಾಟಿನ ಮಾರುಕಟ್ಟೆ ಮೌಲ್ಯದಿಂದ ವಿಭಾಗಿಸಿ ಪಡೆದ ಭೂ ಪ್ರದೇಶದ ಎರಡರಷ್ಟು ಭೂ ಪ್ರದೇಶಕ್ಕೆ ಸಮನಾಗಿರತಕ್ಕದ್ದು. ಕಟ್ಟಡದ ಮೌಲ್ಯದ ವಿಧಾನವು ನಿಯಮಿಸಲಾದಂತೆ ಇರತಕ್ಕದ್ದು. |

(10) ವಿವರಣೆಯ ಶೀರ್ಷಿಕೆಯ ಅಡಿಯಲ್ಲಿ, ಕೋಷ್ಟಕದ ಟಿಪ್ಪಣಿಯ ತರುವಾಯ,-

(ಎ) (ಬಿ) ಖಂಡದಲ್ಲಿ "ಈ ಮೊತ್ತವು, ಸ್ವಾಧೀನಪಡಿಸಿಕೊಳ್ಳಬೇಕಾದ ಪ್ರದೇಶದ ಮಾರುಕಟ್ಟೆ ಮೌಲ್ಯಕ್ಕೆ ಸಮನಾಗಿರತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) (ಕೆ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಕೆ) "ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳು, (ಟಿಡಿಆರ್)" ಎಂದರೆ, ಮಾಲೀಕನು ವರ್ಗಾವಣೆಧಾರಕನಿಗೆ ವರ್ಗಾಯಿಸಿದ ಕಾಲ್ಪನಿಕ ಭೂಮಿಯ ರೂಪದಲ್ಲಿನ ಅಭಿವೃದ್ಧಿ ಹಕ್ಕು, ಅದನ್ನು ಸ್ಥಳೀಯ ಯೋಜನಾ ಪ್ರದೇಶದಲ್ಲಿ ಅಥವಾ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ಪ್ರದೇಶದಲ್ಲಿ ಎಲ್ಲಿಯಾದರೂ ಮಾರಾಟ ಮಾಡಬಹುದು ಅಥವಾ ವಿಲೇವಾರಿ ಮಾಡಬಹುದು ಅಥವಾ ಬಳಸಿಕೊಳ್ಳಬಹುದು. ಕಾಲ್ಪನಿಕ ಭೂಮಿಯ ರೂಪದಲ್ಲಿ ಬಿಟ್ಟುಕೊಟ್ಟ ಪ್ರದೇಶದ ಅಭಿವೃದ್ಧಿ ಹಕ್ಕನ್ನು (ಡಿಆರ್) ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ನಿರ್ದಿಷ್ಟಪಡಿಸಿದಂತೆ ಮೂಲ ಪ್ಲಾಟ್ನ ಮತ್ತು ಸ್ವೀಕರಣ ಪ್ಲಾಟ್ನ ಮಾರುಕಟ್ಟೆ ಮೌಲ್ಯವನ್ನು ವಿಭಜನೆ ಮಾಡಿದ ತರುವಾಯ ಮಾತ್ರವೇ ಟಿಡಿಆರ್ ಆಗಿ ಬಳಸಲು ಅನುಮತಿಸತಕ್ಕದ್ದು"; ಮತ್ತು

(ಸಿ) ಹಾಗೆ ಪ್ರತಿಯೋಜಿಸಿದ (ಕೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಲ್) "ವರ್ಗಾಯಿತ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರ (ಟಿಡಿಆರ್ ಸಿ)" ಎಂದರೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರದ (ಡಿಆರ್‌ಸಿ) ಧಾರಕನು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳಾಗಿ (ಟಿಡಿಆರ್) ವರ್ಗಾಯಿಸಿದ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರ, ಆನಂತರದ ಯಾರೇ ಟಿಡಿಆರ್ ಸಿ ಧಾರಕನು ವರ್ಗಾಯಿಸಿದ, ಟಿಡಿಆರ್‌ಗಾಗಿಯೂ ಸಹ ಟಿಡಿಆರ್ ಸಿಯನ್ನು ನೀಡತಕ್ಕದ್ದು."

**4. 17ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,-

(1) (2-ಸಿ) ಉಪಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"(2-ಸಿ). ಒಬ್ಬ ವ್ಯಕ್ತಿಯು, ಎರಡು ಹಂತಗಳಲ್ಲಿ ನಿವೇಶನಗಳ ಬಿಡುಗಡೆಯನ್ನು ಇಚ್ಛಿಸಿದಲ್ಲಿ ಅದಕ್ಕೂ ಸಹ ಅನುಮತಿಯನ್ನು ನೀಡಬಹುದು. ಅಂಥ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರವು ತಾತ್ಕಾಲಿಕ ಲೇ ಔಟ್ ಪ್ಲಾನಿನ ಅನುಮೋದನೆಯ ತರುವಾಯ ಮೊದಲನೇ ಹಂತದಲ್ಲಿ

ಲೇಔಟಿನಲ್ಲಿನ ಶೇಕಡ ನಲವತ್ತರಷ್ಟು ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಉಳಿದ ಶೇಕಡ ಅರವತ್ತರಷ್ಟು ನಿವೇಶನಗಳನ್ನು ಎಲ್ಲ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ತರುವಾಯ ಈ ಮುಂದಿನ ರೀತಿಯಲ್ಲಿ ಬಿಡುಗಡೆ ಮಾಡತಕ್ಕದ್ದು, ಎಂದರೆ:-

(i) ಶೇಕಡ ನಲವತ್ತರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಮೊದಲು ನಿಯಮಿಸಲಾದ ರೀತಿಯಲ್ಲಿ ತಾತ್ಕಾಲಿಕ ಲೇಔಟ್ ಪ್ಲಾನಿನ ಅನುಮೋದನೆಯ ನಂತರ ಯೋಜನಾ ಪ್ರಾಧಿಕಾರವು,-

(ಎ) ಲೇ ಔಟ್‌ನಲ್ಲಿ ಉದ್ಯಾನವನ, ಆಟದ ಮೈದಾನ ಮತ್ತು ರಸ್ತೆಗಳಿಗಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಮೀಸಲಿರಿಸಿದ ಹಾಗೂ ಗುರುತಿಸಿದ ಪ್ರದೇಶವನ್ನು ಬಿಟ್ಟುಕೊಡುವ ಮತ್ತು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೇ ನಾಗರೀಕ ಸೌಲಭ್ಯಗಳಿಗಾಗಿ ಯೋಜನಾ ಪ್ರಾಧಿಕಾರಕ್ಕೆ ಮೀಸಲಿರಿಸಿದ ಮತ್ತು ಗುರುತಿಸಿದ ಪ್ರದೇಶವನ್ನು ಬಿಟ್ಟು ಕೊಡುವ ಅರ್ಜಿದಾರನಿಂದ ನಿಯಮಿಸಿದ ನಮೂನೆಯಲ್ಲಿ ನೋಂದಾಯಿತ ಬಿಟ್ಟುಕೊಡುವ ಪತ್ರವನ್ನು ಪಡೆಯತಕ್ಕದ್ದು.

(ಬಿ) ಯೋಜನಾ ಪ್ರಾಧಿಕಾರಕ್ಕೆ ಲೇಔಟ್ ನಲ್ಲಿನಲ್ಲಿರುವ ಎಲ್ಲಾ ಮೂಲೆ ನಿವೇಶನಗಳ ನೋಂದಾಯಿತ ಅಡಮಾನ ಒಪ್ಪಂದವನ್ನು ಸಹ ಪಡೆಯತಕ್ಕದು; ಮತ್ತು

(ಸಿ) ರಿಯಲ್ ಎಸ್ಟೇಟ್ (ವಿನಿಯಮನ ಮತ್ತು ಅಭಿವೃದ್ಧಿ) ಅಧಿನಿಯಮ, 2016ರ ( 2016ರ ಕೇಂದ್ರ ಅಧಿನಿಯಮ 16) ಅಡಿಯಲ್ಲಿ ಯೋಜನೆಯನ್ನು ನೋಂದಾಯಿಸಲಾಗಿದೆಯೇ ಎಂಬುದನ್ನು ಖಾತರಿಪಡಿಸತಕ್ಕದ್ದು;

(ii) ಯೋಜನಾ ಪ್ರಾಧಿಕಾರವು, ಮೇಲಿನ ದಸ್ತಾವೇಜುಗಳನ್ನು ಪಡೆದುಕೊಂಡ ತರುವಾಯ, ತಾತ್ಕಾಲಿಕವಾಗಿ ಅನುಮೋದಿತವಾದ ಲೇಔಟ್ ಪ್ಲಾನ್ ನ ಮೇಲೆ ಪ್ರಾಧಿಕಾರದ ಮೊಹರು ಲಗತ್ತಿಸಿ ಬಿಡುಗಡೆಮಾಡಿದ ಕಟ್ಟಡದ ನಿವೇಶನಗಳನ್ನು ತೋರಿಸುವ, ಲೇ ಔಟಿನಲ್ಲಿ ಅಲ್ಲಲ್ಲಿ ಇರುವ ಶೇಕಡ ನಲವತ್ತರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸತಕ್ಕದ್ದು, ಅದನ್ನು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಮತ್ತು ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ XVI) ರ ಮೇರೆಗೆ ನೋಂದಣಿಯ ಉದ್ದೇಶಕ್ಕಾಗಿ ಅಂಥ ನಿವೇಶನಗಳ ಖಾತಾ ನೀಡಿಕೆಗಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(iii) ತಾತ್ಕಾಲಿಕ ಲೇಔಟ್ ಪ್ಲಾನ್ ನ ಅನುಮೋದನೆಯ ದಿನಾಂಕದಿಂದ ಮೂರು ವರ್ಷಗಳ ಒಳಗಾಗಿ ಸಂಬಂಧಪಟ್ಟ ಪ್ರಾಧಿಕಾರ ಅಥವಾ ಏಜೆನ್ಸಿ ಅಥವಾ ಇಲಾಖೆಯಿಂದ ಪರಿಶೀಲನೆ ನಡೆಸಿದ ತರುವಾಯ ಸೌಲಭ್ಯಗಳನ್ನು, (2ಎ) ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಪೂರ್ಣಗೊಳಿಸುವಿಕೆಯನ್ನು ಯೋಜನಾ ಪ್ರಾಧಿಕಾರವು ಖಚಿತಪಡಿಸಿಕೊಳ್ಳತಕ್ಕದ್ದು. ತಾತ್ಕಾಲಿಕ ಲೇಔಟ್ ಪ್ಲಾನಿನ ಅನುಮೋದನೆಯ ದಿನಾಂಕದಿಂದ ಮೂರು ವರ್ಷಗಳೊಳಗೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸುವಿಕೆಗಾಗಿ ಪೂರ್ಣಗೊಳಿಸಿದ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳದಿದ್ದರೆ, ಯೋಜನಾ ಪ್ರಾಧಿಕಾರವು ದಾಖಲಿಸಬೇಕಾದ ಕಾರಣಗಳಿಗಾಗಿ ಅಭಿವೃದ್ಧಿ ಪೂರ್ಣಗೊಳಿಸುವಿಕೆ ಅವಧಿಯನ್ನು ಒಂದು ವರ್ಷದ ಇನ್ನೊಂದು ಅವಧಿಗೆ ವಿಸ್ತರಿಸಬಹುದು.

(iv) ಉದ್ಯಾನವನ, ಆಟದ ಮೈದಾನ ಮತ್ತು ನಾಗರೀಕ ಸೌಲಭ್ಯ ನಿವೇಶನಗಳ ಅಭಿವೃದ್ಧಿಯನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಮತ್ತು ಮೂರು ವರ್ಷಗಳೊಳಗೆ ಅಥವಾ ವಿಸ್ತರಿಸಿದ ಅವಧಿಯೊಳಗೆ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ಏಜೆನ್ಸಿ ಅಥವಾ ಇಲಾಖೆಯಿಂದ ಪಡೆದುಕೊಂಡ ಮೇಲೆ, ಯೋಜನಾ ಪ್ರಾಧಿಕಾರವು ಪ್ರಾಧಿಕಾರಕ್ಕೆ ಅಡಮಾನವಿರಿಸಿದ ಮೂಲೆ ನಿವೇಶನಗಳೊಂದಿಗೆ ಉಳಿದ ಶೇಕಡ ಅರವತ್ತರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿ ಅಂತಿಮ ಲೇಔಟ್ ಪ್ಲಾನನ್ನು ಅನುಮೋದಿಸತಕ್ಕದ್ದು. ಕಟ್ಟಡ ನಿವೇಶನಗಳನ್ನು ತೋರಿಸುವ ಅಂತಿಮ ಲೇಔಟ್ ಪ್ಲಾನಿನ ಒಂದು

ಪ್ರತಿಯನ್ನು ಯೋಜನಾ ಪ್ರಾಧಿಕಾರದ ಮೊಹರನ್ನು ಹಾಕಿ ಅಂಥ ನಿವೇಶನಗಳಿಗೆ ಖಾತಾ ನೀಡಲು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಮತ್ತು ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ XVI) ಅಡಿಯಲ್ಲಿ ನೋಂದಣಿಯ ಉದ್ದೇಶಕ್ಕಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು:

ಪರಂತು (iii)ನೇ ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳದಿರುವ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರಕ್ಕೆ ಅಡಮಾನವಿರಿಸಿರುವ ಮೂಲೆ ನಿವೇಶನಗಳನ್ನು ಯೋಜನಾ ಪ್ರಾಧಿಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು."

(2) ಹಾಗೆ ಪ್ರತಿಯೋಜಿಸಿದ (2ಸಿ) ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಡಿ). (2ಬಿ) ಉಪ ಪ್ರಕರಣದ ಅಡಿಯಲ್ಲಿ ತಾತ್ಕಾಲಿಕವಾಗಿ ಅನುಮೋದಿಸಲಾದ ಲೇಔಟಿನ ಸಂದರ್ಭದಲ್ಲಿ, (2ಎ) ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅಭಿವೃದ್ಧಿ ಕಾಮಗಾರಿಗಳನ್ನು ತಾತ್ಕಾಲಿಕ ಲೇಔಟ್ ಪ್ಲಾನಿನ ಅನುಮೋದನೆಯ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು:

ಪರಂತು, ಯೋಜನಾ ಪ್ರಾಧಿಕಾರವು ಈ ಬಗ್ಗೆ ಸಲ್ಲಿಸಿದ ಅರ್ಜಿಯ ಮೇಲೆ ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಅದು ಅವಶ್ಯಕವೆಂದು ಪರಿಗಣಿಸಬಹುದಾದಂತೆ ಲೇಔಟ್ ಅಭಿವೃದ್ಧಿಗಾಗಿನ ಅವಧಿಯನ್ನು ಒಂದು ವರ್ಷ ಮೀರದ ಮತ್ತೊಂದು ಅವಧಿಗೆ ವಿಸ್ತರಿಸಬಹುದು. ಅಭಿವೃದ್ಧಿ ಕಾಮಗಾರಿಗಳು ಅಂಥ ನಿರ್ದಿಷ್ಟ ಅವಧಿಯೊಳಗೆ ಪೂರ್ಣಗೊಳ್ಳದಿದ್ದ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರವು ನೀಡಿದ ಅನುಮತಿಯು ರದ್ದಾಗತಕ್ಕದ್ದು. ತದನಂತರ ಅರ್ಜಿದಾರನು ಯುಕ್ತ ಕಾರ್ಯವಿಧಾನವನ್ನು ಅನುಸರಿಸಿ ಹೊಸ ಅನುಮೋದನೆಯನ್ನು ಕೋರತಕ್ಕದ್ದು.

(2ಇ). ಈ ಅಧಿನಿಯಮದ ಅಡಿಯಲ್ಲಿ ಯೋಜನಾ ಪ್ರಾಧಿಕಾರವು ಬಿಡುಗಡೆ ಮಾಡದಿರುವ ಯಾವುದೇ ಕಟ್ಟಡ ನಿವೇಶನಕ್ಕೆ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ರ (1964ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) ಅಥವಾ ಸಂದರ್ಭಾನುಸಾರವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ 53) ಅಡಿಯಲ್ಲಿ ಯಾವುದೇ ಖಾತಾ ಅಥವಾ ಸ್ವತ್ತು ಸೂಚ್ಯಂಕ ಸಂಖ್ಯೆ (ಇ-ಖಾತಾ) ನೀಡತಕ್ಕದ್ದಲ್ಲ.".

**5. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧ್ಯಾದೇಶ, 2021ನ್ನು (2021ರ ಕರ್ನಾಟಕ ಅಧ್ಯಾದೇಶ 06) ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಎರಡನೇ ತಿದ್ದುಪಡಿ) ಅಧ್ಯಾದೇಶ, 2021ನ್ನು (2021ರ ಕರ್ನಾಟಕ ಅಧ್ಯಾದೇಶ 07) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶಗಳ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



The above translation of the Karnataka Town and Country Planning (Amendment) Act, 2021 (Karnataka Act 31 of 2021) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ - ೪ಎ | ಬೆಂಗಳೂರು, ಬುಧವಾರ, ೧೮, ಮೇ, ೨೦೨೨(ವೈಶಾಖ, ೨೮, ಶಕವರ್ಷ, ೧೯೪೪) | ನಂ. ೨೮೭ |
|---|---|---|
| Part – IVA | BENGALURU, WEDNESDAY, 18, MAY, 2022(VAISHAKHA, 28, SHAKAVARSHA, 1944) | No. 287 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 15 SHASANA 2022, BENGALURU, DATED:18.05.2022**

The Karnataka Municipalities (Amendment) Ordinance, 2022 ಇದಕ್ಕೆ 2022ರ ಮೇ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2022ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 03 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

# KARNATAKA ORDINANCE NO. 03 OF 2022

## THE KARNATAKA MUNICIPALITIES (AMENDMENT) ORDINANCE, 2022

(Promulgated by the Governor of Karnataka in the Seventy third year of the Republic of India and first published in the Karnataka Gazette Extra-ordinary on the 18th day of May, 2022)

An Ordinance further to amend the Karnataka Municipalities Act, 1964 (Karnataka Act 22 of 1964);

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement.–** (1) This Ordinance may be called the Karnataka Municipalities (Amendment) Ordinance, 2022.

(2) It shall be deemed to have come into force with effect from the 12th day of August, 2021.

**2. Amendment of section 387.-** In the Karnataka Municipalities Act, 1964 (Karnataka Act 22 of 1964), section 387, shall be omitted.

**THAAWARCHAND GEHLOT**
**GOVERNOR OF KARNATAKA**

By order and in the name of the
Governor of Karnataka,

**(G. SRIDHAR)**
Secretary to Government
Department of Parliamentary Affairs and
Legislation.

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 15 ಶಾಸನ 2022, ಬೆಂಗಳೂರು, ದಿನಾಂಕ:18.05.2022**

The Karnataka Official Language Act, 1963 (Karnataka Act 26 of 1963)ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ The Karnataka Municipalities (Amendment) Ordinance, 2022 (Karnataka Ordinance 03 of 2022) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2022ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 03**

(2022ರ ಮೇ ತಿಂಗಳ 18ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022**

(ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2022ರ ಮೇ 18ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ಕ್ಕೆ ತಿದ್ದುಪಡಿ ಮಾಡಲು ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ

No. KARBIL/2001/47147 POSTAL REGN. No. RNP/KA/BGS/2202/2017-19
L...sed to post without prepayment WPP No. 297



ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ, ಈಗ ಭಾರತ ಸಂವಿಧಾನದ 213ನೇ ಅನುಚ್ಛೇಧದ (1)ನೇ ಖಂಡದಲ್ಲಿ, ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕದ ಮಾನ್ಯ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿರುತ್ತಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022 ಎಂದು ಕರೆಯತಕ್ಕದ್ದು.

(2) ಇದು 2021ರ ಆಗಸ್ಟ 12ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 387ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ 387ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

The above translation of the Karnataka Municipalities (Amendment) Ordinance, 2022 (Karnataka Ordinance 03 of 2022) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ
ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE